**ದಿನಾಂಕ : *07-11-2025* ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು : *2* ನೇ ಎದುರುದಾರರ ಪರ ಶ್ರೀ ಎಮ್ ಎಸ್ ?ಹೆಚ್ ವಕೀಲರಿಂದ**

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನನ್ನ ಅಣ್ಣ ನೀಡಿರುತ್ತಾರೆ. ನಾನು ಅಪಘಾತವಾದ ದಿನ ಸಂಗಮದಿಂದ ಇಲಕಲ್ಲಗೆ ಹೊರಟಿದ್ದೆನು. ನಾನು ಮತ್ತು ನನ್ನ ಹೆಂಡತಿ ಇಬ್ಬರು ಬೈಕ ಮೇಲೆ ಹೊರಟಿದ್ದೇವು. ನಾನು ಕೂಡಲಸಂಗಮವನ್ನು ಬೆಳಿಗ್ಗೆ *8.30* ಗಂಟೆ ಸುಮಾರಿಗೆ ಬಿಟ್ಟಿದ್ದೇವು. ಅಪಘಾತದ ಜಾಗೆಗೆ ಬಂದಾಗ ಬೆಳಿಗ್ಗೆ *10.00* ಗಂಟೆಯಾಗಿತ್ತು. ಅಪಘಾತವಾದ ದಿನ ಲಾರಿ ಚಾಲಕನು ನಮ್ಮ ಹಿಂದಿನಿಂದ ಬಂದು ಡಿಕ್ಕಿ ಪಡಿಸಿರುತ್ತಾನೆ. ನನ್ನ ಬೈಕಿನ ನಂಬರ ಕೆಎ-*29* ಎಂದು ಮಾತ್ರ ಗೊತ್ತು. ಲಾರಿ ನಂಬರ ನೆನಪಿರುವುದಿಲ್ಲ. ಮೋಟರ ಸೈಕಲ್ಲ ಚಲಾಯಿಸಲು ಡಿ ಎಲ್ ಇರಲಿಲ್ಲ. ಅಪಘಾತವಾದ ನಂತರ ಇಲಕಲ್ಲದ ಮಹಾಂತೇಶ ಆಸ್ಪತ್ರೆಗೆ ಅಡ್ಮಿಟ್ ಆಗಿರುತ್ತೇನೆ. ಅಲ್ಲಿ ನನ್ನ ಎಡಗಾಲಿನಲ್ಲಿ ಪೆಟ್ಟಾಗಿದ್ದು, ಆಪರೇಷನ್ ಮಾಡಬೇಕೆಂದು ಹೇಳಿದ್ದರು. ನಾನು *1* ತಿಂಗಳ ಕಾಲ ಆಸ್ಪತ್ರೆಯಲ್ಲಿ ಇದ್ದೇನು. ಆಪರೇಷನನ್ನು ನನ್ನ ಎಡಗಾಲಿಗೆ ಮಾಡಿರುತ್ತಾರೆ. ಅಪಘಾತವಾದ ಜಾಗೆಯಲ್ಲಿ ರೋಡ ಹಂಪ್ಸಗಳು ಇರುತ್ತವೆ ಎಂದರೆ ಸರಿ. ನಾನು ನನ್ನ ಮೋಟರ ಸೈಕಲ್ಲನ್ನು ವೇಗವಾಗಿ ಚಲಾಯಿಸಿದ್ದರಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ರೋಡ ಹಂಪ್ಸ ಇದ್ದಾಗಲೂ ಕೂಡ ನನ್ನ ವಾಹನವನ್ನು ಕಂಟ್ರೋಲ ಮಾಡಲು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪೋಲಿಸರು ಲೈಟ ಹಾಕಿದ್ದರು ಎಂದರೆ ಸರಿಯಲ್ಲ. ಲಾರಿಯು ತುಂಬಾ ವೇಗವಾಗಿ ಬರುತ್ತಿತ್ತು. ನಾನು ಹಾಕಿರುವ ವೈದ್ಯಕೀಯ ಬಿಲ್ಲುಗಳು ಖೊಟ್ಟಿಯಾಗಿರುತ್ತವೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ಬಿಲ್ಲುಗಳ ಲೆಕ್ಕ ತಪ್ಪು ಇರುತ್ತದೆ ಎಂದರೆ ಸರಿಯಲ್ಲ. ನಾನು *97,500/-* ರೂ.ಗಳನ್ನು ಹಂತ ಹಂತವಾಗಿ ನೀಡಿರುತ್ತೇನೆ. ನಾನು ಒಂದು ಸಲ *40,000/-* ಮತ್ತೊಂದು ಸಲ *9,500/-* ಮತ್ತು ಇನ್ನೊಂದು ಸಲ *35,000/-* ಮತ್ತು ಇನ್ನೊಂದು ಸಲ *13,000/-* ರೂ.ಗಳನ್ನು ಕೊಟ್ಟಿರುತ್ತೇನೆ ಎಂದರೆ ಸರಿ. ಈ ಬಿಲ್ಲುಗಳನ್ನು *2* ಬಾರಿ ಸಲ್ಲಿಸಿರುತ್ತೇನೆ. ನಾನು ಕೇವಲ *1,41,004/-* ರೂ.ಗಳು ಮಾತ್ರ ಆಸ್ಪತ್ರೆಯಲ್ಲಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಬಿಲ್ಲುಗಳನ್ನು ಡಬಲ್ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಒಕ್ಕಲುತನ ಮಾಡುತ್ತೇನೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ನಾನು ತಿಂಗಳಿಗೆ *25,000/-* ಸಾವಿರ ರೂ.ಗಳನ್ನು ದುಡಿಯುತ್ತೇನೆ

ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಅಪಘಾತವಾದಾಗ ನನಗೆ *32* ವರ್ಷ ವಯಸ್ಸು ಇತ್ತು. ವಯಸ್ಸಿನ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ನಾನು ಮೊದಲಿನ ತರ ಆರಾಮ ಇರುತ್ತೇನೆ ಎಂದರೆ ಸರಿಯಲ್ಲ. ನಾನು ಈಗ ಊರಿನಲ್ಲಿಯೇ ತೋರಿಸಿಕೊಳ್ಳುತ್ತಿದ್ದೇನೆ. ಅಪಘಾತವು ನನ್ನ ತಪ್ಪಿನಿಂದ ಆಗಿದ್ದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೊದಲಿನ ತರ ಆರಾಮ ಇದ್ದರೂ ಕೂಡ ಪರಿಹಾರದ ಹಣಕ್ಕೋಸ್ಕರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ )

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ, ಹುನಗುಂದ.